ಇಲ್ಲಿ ಉಲ್ಲೇಖಿಸಿದ ಕವನದ ಸಾಲುಗಳು ಸ್ವಯಂಸ್ಪಷ್ಟವಾಗಿವೆ; ವ್ಯಾಖ್ಯಾನವಿಲ್ಲದೆ ವೇದ್ಯವಾಗುತ್ತವೆ. ಚಂಪಾ ಅವರ ನೇರ ನುಡಿನಿಷ್ಠೆಯ ಅಭಿವ್ಯಕ್ತಿಯ ಅಂತರಾಳವನ್ನು ಅನಾವರಣಗೊಳಿಸುತ್ತವೆ. ಚಂಪಾ ಅವರ ಬರವಣಿಗೆಯಲ್ಲಿ ವ್ಯಂಗ್ಯ–ವಿಡಂಬನೆಗಳು ಸಹಜ ಸ್ಥಾನ ಪಡೆದು ಮುನ್ನಲೆಗೆ ಬಂದಿವೆ. ಹೀಗಾಗಿ, ಅವರ ಎಷ್ಟೋ ಗಂಭೀರ ರಚನೆಗಳು ಹಿನ್ನೆಲೆಗೆ ಸರಿದಿವೆ. ಅವರ ವಿಡಂಬನೆ ಶಕ್ತಿಯು ವಸ್ತು ವಿಷಯಗಳಿಗೆ ಸೀಮಿತವಲ್ಲ; ವ್ಯಕ್ತಿಗಳತ್ತ ಹರಿದಾಗ ಚುರುಕಾದದ್ದೇ ಹೆಚ್ಚು. ಯಾವುದೇ ವ್ಯಕ್ತಿಯಲ್ಲಿ ತಮಗೆ 'ಸಣ್ಣತನ' ಕಂಡರೆ ಒಮ್ಮೊಮ್ಮೆ ಕಟಕಿಯಾಡದೆ ಬಿಡದ ಚಂಪಾ ನವಿರಾಗಿಯೂ ವಿಡಂಬಿಸುತ್ತಿದ್ದುದು ಉಂಟು. ಇಂಥ ವ್ಯಂಗ್ಯ–ವಿಡಂಬನೆಗಳಿಗೆ ಅವರ ಸಂಪಾದಕತ್ವ 'ಸಂಕ್ರಮಣ' ಸಾಹಿತ್ಯ ಪತ್ರಿಕೆಯ 'ಚಂಪಾದಕೀಯ' (ಸಂಪಾದಕರ ನುಡಿಗಳಿಗೆ ಇಟ್ಟ ಹೆಸರು ಇದು) ಸಾಕಷ್ಟು ಸಾಕ್ಷ್ಯಗಳನ್ನು ಒದಗಿಸುತ್ತದೆ. ಒಂದು ಪ್ರಸಂಗ ನೆನಪಾಗುತ್ತದೆ. ಇದು ನಗು ನಗುತ್ತಲೇ ಕಾಲೆಳೆಯುವ ಪ್ರಸಂಗ. ಕನ್ನಡದ ಪ್ರಸಿದ್ಧ ನಾಟಕಕಾರ ಗಿರೀಶ ಕಾರ್ನಾಡರ ಜೊತೆ ಸಂಭಾಷಣೆ ನಡೆಸಿದ ಕಾಲ್ಪನಿಕ ಪ್ರಸಂಗದಲ್ಲಿ ಚಂಪಾ, 'ನಿಮ್ಮ ಕನ್ನಡ ನಾಟಕಗಳನ್ನು ಅನುವಾದ ಮಾಡಬೇಕು ಅಂತಿದ್ದೇನೆ' ಎನ್ನುತ್ತಾರೆ. ಕಾರ್ನಾಡರಿಗೆ ಖುಷಿ, 'ಯಾವ ಭಾಷೆಗೆ?' ಎಂದು ಕೇಳುತ್ತಾರೆ. ಚಂಪಾ ಕೂಡಲೇ, 'ಕನ್ನಡಕ್ಕೆ' ಎನ್ನುತ್ತಾರೆ! ಅಂದರೆ, ಇದು ಕಾರ್ನಾಡರ ಕನ್ನಡವನ್ನು ವ್ಯಂಗ್ಯದಿಂದ ಕಂಡ ಚಂಪಾ ಉವಾಚ. ಇಂಥ ಅನೇಕ ಪ್ರಸಂಗಗಳು ಅವರ ಬರವಣಿಗೆಯಲ್ಲಿ ಬಂದು ಹೋಗುತ್ತವೆ. ಬೇಂದ್ರೆ, ರಾಮಚಂದ್ರ ಶರ್ಮ, ಬನ್ನಂಜೆ ಮುಂತಾದವರೆಲ್ಲ ಚಂಪಾ ಅವರ ಲಘು ಪ್ರಹಸನಗಳಿಗೆ ಆಹಾರವಾಗಿದ್ದಾರೆ.

ಚಂಪಾ ಅವರ ವ್ಯಂಗ್ಯ–ವಿಡಂಬನೆಗಳು ಎಷ್ಟು ಪ್ರಸಿದ್ಧವಾಗಿದ್ದವೆಂದರೆ, ಅವರು ಗಂಭೀರವಾಗಿ ಬರೆದರೂ ಅಲ್ಲಿ ವ್ಯಂಗ್ಯ ಇದೆಯಾ ಎಂಬ ಅನುಮಾನ ಮೂಡುತ್ತಿತ್ತು. ಈಗ ನನ್ನದೇ ಒಂದು ಉದಾಹರಣೆ ನೆನಪಾಗುತ್ತದೆ. 'ಸಂಕ್ರಮಣ'ದ ಸಂಪಾದಕರ ಬರಹದಲ್ಲಿ ಒಮ್ಮೆ 'ಕರ್ನಾಟಕದಲ್ಲಿ ಬರಗೂರರಿಗೆ ಎಲ್ಲ ಸಾಹಿತಿಗಳಿಗಿಂತ ಹೆಚ್ಚು ಅಭಿಮಾನಿ ಸಂಘಗಳಿವೆ' ಎಂಬರ್ಥದ ಮಾತು ಬರೆದು ಅದಕ್ಕೆ ನಾನು ಕೆಲವರಿಗೆ ಸಹಾಯ ಮಾಡುತ್ತಿದ್ದದ್ದು ಕಾರಣವೆಂಬ ವಿವರವನ್ನು ಕೊಟ್ಟಿದ್ದರು. ಅಭಿಮಾನಿ ಸಂಘಗಳ ಪ್ರಸ್ತಾಪದಲ್ಲಿ ಸ್ವಲ್ಪ ವ್ಯಂಗ್ಯವಿರುವ ಅಥವಾ ಕಚುಗುಳಿ ಇಟ್ಟಿರುವ ಅನುಮಾನ ಬಂದಿತ್ತು. ಇನ್ನೊಮ್ಮೆ–ಬರಗೂರರನ್ನು ಬಂಡಾಯದ ಗೆಳೆಯರೆಲ್ಲ 'ಬಂಡಾಯದ ಗಾಂಧಿ' ಎಂದು ಕರೆಯುತ್ತೇವೆ ಎಂಬ ಮಾತನ್ನು ಗಂಭೀರ ಧಾಟಿಯಲ್ಲೇ ಬರೆದಿದ್ದರು. ಆದರೂ ನಾನು ಇದರಲ್ಲೂ ಏನಾದರೂ ವ್ಯಂಗ್ಯ ಇರಬಹುದೆ ಎಂದು ಮತ್ತೆ ಮತ್ತೆ ಓದಿದ್ದೆ!

'ಸಂಕ್ರಮಣ'ದ ವಿಷಯ ಹೇಳದಿದ್ದರೆ ಚಂಪಾ ಅವರ ಬಗ್ಗೆ ಪೂರ್ಣ ಹೇಳಿದಂತೆ ಆಗುವುದಿಲ್ಲ. ಮೊದಲು ಚಂಪಾ, ಗಿರಡ್ಡಿ ಗೋವಿಂದರಾಜ, ಸಿದ್ಧಲಿಂಗ ಪಟ್ಟಣಶೆಟ್ಟಿಯವರ ಸಂಪಾದಕತ್ವದಲ್ಲಿ ದ್ವೈಮಾಸಿಕವಾಗಿ ಪ್ರಕಟಗೊಳ್ಳುತ್ತಿದ್ದ 'ಸಂಕ್ರಮಣ'ವು ಅನಂತರ ಚಂಪಾ ಒಬ್ಬರ ಸಂಪಾದಕತ್ವದಲ್ಲಿ ಮಾಸಿಕವಾಗಿ ಪ್ರಕಟವಾಗತೊಡಗಿತು. ಐವತ್ತು ವರ್ಷಗಳನ್ನೂ ಮೀರಿ ಪ್ರಕಟವಾಗುತ್ತಾ ಬಂದ 'ಸಂಕ್ರಮಣ' ಸಾಹಿತ್ಯ ಕ್ಷೇತ್ರದ ಒಂದು ದಾಖಲೆಯೇ ಸರಿ. 'ಸಂಕ್ರಮಣ'ವನ್ನು ವಿಸ್ತರಿಸುವ ನಿತ್ಯಬದ್ಧತೆಯಲ್ಲಿ ದುಡಿದ ಚಂಪಾ ಒಬ್ಬ "ಸಾಂಸ್ಕೃತಿಕ ಶ್ರಮಜೀವಿ"ಯೂ ಹೌದು. ತನ್ನ ಬಹುಪಾಲು ಸಾಂಸ್ಕೃತಿಕ ಶ್ರಮವನ್ನು ಅವರು 'ಸಂಕ್ರಮಣ'ಕ್ಕೆ ವಿನಿಯೋಗಿಸಿದ್ದಾರೆ. ಈ ಪತ್ರಿಕೆಯಲ್ಲಿ ಅನೇಕ ಹೊಸ ಪ್ರತಿಭೆಗಳಿಗೆ ಅವಕಾಶ ನೀಡಿದ್ದಾರೆ. ಸಾಹಿತ್ಯ ಸ್ಪರ್ಧೆ ಮಾಡಿ ಬಹುಮಾನಗಳನ್ನು ನೀಡಿದ್ದಾರೆ. ಅಷ್ಟೇ ಏಕೆ, ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ಇದ್ದುಕೊಂಡೇ 'ಸಂಕ್ರಮಣ ಸಾಹಿತ್ಯ ಸಮ್ಮೇಳನ'ವನ್ನು ಏರ್ಪಡಿಸಿದ್ದಾರೆ. 'ಇದೂ ಬಂಡಾಯದ ಕೆಲಸಾನೇ ಬರಗೂರ್' ಎಂದು ನನಗೆ ಸಮಜಾಯಿಷಿ ನೀಡಿದ್ದಾರೆ! ಹೀಗೆ ಹೇಳುತ್ತಲೇ ಕೆಲವು ಕಡೆ 'ಸಂಕ್ರಮಣ'ಕ್ಕೆ ಸಂಚಾಲಕರನ್ನೂ ನೇಮಿಸಿದ್ದಾರೆ.